**ಕರ್ನಾಟಕ ಸರ್ಕಾರ**

ಸಂಖ್ಯೆ: ಕಪಂರಾಆ/ಅಭಿ/ದೂ.ದೃ.ಯೋ/406/2022

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15.02.2023.

**ಸುತ್ತೋಲೆ**

ವಿಷಯ:- "ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ" ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾಯೋಜನೆಯ ಅಂಗವಾಗಿ ಗ್ರಾಮ ಸಭೆಗಳನ್ನು ಆಯೋಜಿಸುವ ಕುರಿತು.

ಉಲ್ಲೇಖ:1. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯ ಹೊರಡಿಸಿರುವ ಗ್ರಾಮ ಪಂಚಾಯತಿ / ತಾಲ್ಲೂಕು ಪಂಚಾಯತಿ / ಜಿಲ್ಲಾ ಪಂಚಾಯತಿ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ರೂಪುರೇಷೆಯ ವರದಿ- 2022.

2. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣ ವರದಿ ಅನ್ವಯ

3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಕ.ಪಂ.ರಾ.ಆ/ ಅಭಿವೃದ್ಧಿ/406/2022, ಬೆಂಗಳೂರು , ದಿನಾಂಕ:26.08.2022.

4. ಸಮ ಸಂಖ್ಯೆಯ ಆದೇಶ ದಿನಾಂಕ: 17.09.2022.

5. ಸಮ ಸಂಖ್ಯೆಯ ಆದೇಶ ದಿನಾಂಕ:27.10.2022.

6. ಸಮ ಸಂಖ್ಯೆಯ ಆದೇಶ ದಿನಾಂಕ:15.12.2022

7 ಸಮ ಸಂಖ್ಯೆಯ ಆದೇಶ ದಿನಾಂಕ:27.01.2023.

*****

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 309 ಬಿ ಯಡಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಮುಂದಿನ 05 ವರ್ಷದ ದೂರದೃಷ್ಠಿ ಯೋಜನೆಯನ್ನು ಸಿದ್ಧಪಡಿಸಬೇಕಾಗಿದೆ. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ ಉಲ್ಲೇಖ (1) ಮತ್ತು (2)ರನ್ವಯ ಸ್ಥಳೀಕರಣಗೊಂಡ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಗಮನದಲ್ಲಿ ಇಟ್ಟುಕೊಂಡು ವಾರ್ಷಿಕ ಕ್ರಿಯಾಯೋಜನೆಗಳನ್ನು ಸಿದ್ಧಪಡಿಸಬೇಕಾಗಿದೆ. ಉಲ್ಲೇಖ(3)ರ ಸರ್ಕಾರದ ಆದೇಶದಲ್ಲಿ ದೂರದೃಷ್ಟಿ ಯೋಜನೆ ಸಿದ್ಧಪಡಿಸಲು ಉಲ್ಲೇಖ (4)ರನ್ವಯ ರಚಿಸಲಾಗಿರುವ ಗ್ರಾಮ ಮತ್ತು ಗ್ರಾಮ ಯೋಜನಾ ಸಮಿತಿಗಳ ಸಹಯೋಗದೊಂದಿಗೆ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಲು ಕ್ರಮವಹಿಸಲಾಗಿದೆ. ಉಲ್ಲೇಖ(5) ರನ್ವಯ ಯೋಜನೆ ಸಿದ್ಧಪಡಿಸುವ ಪ್ರಕಿಯೆಯಲ್ಲಿ ಕೆಲವೊಂದು ಮಾರ್ಪಾಡು ಮಾಡಿ ಯೋಜನೆಗೆ ಕಾಲಮಿತಿಯನ್ನು ನಿಗದಿಪಡಿಸಲಾಗಿರುತ್ತದೆ. ಉಲ್ಲೇಖ (6)ರ ಆದೇಶದನ್ವಯ ಗ್ರಾಮ ಪಂಚಾಯಿತಿ ದೂರದೃಷ್ಟಿಯನ್ನು ಆಧರಿಸಿ ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಭಾಗವಾಗಿಸಿ 2023-24ನೇ ಸಾಲಿನ ಪಂಚಾಯಿತಿ ಅಭಿವೃದ್ಧಿ

ಯೋಜನೆಗಳನ್ನು ಸಿದ್ಧಪಡಿಸಲು ಆದೇಶಿಸಲಾಗಿರುತ್ತದೆ. ಉಲ್ಲೇಖ (7)ರ ಆದೇಶದನ್ವಯ ಕಾಲಮಿತಿಯಲ್ಲಿ ಮಾರ್ಪಾಡು ಮಾಡಿ ಆದೇಶಿಸಲಾಗಿದೆ.

ಸದರಿ ಯೋಜನೆಗಳನ್ನು ಸಮುದಾಯದ ಸಹಭಾಗಿತ್ವದೊಂದಿಗೆ ಸಿದ್ಧಪಡಿಸಬೇಕಾಗಿರುವುದರಿಂದ ಹಲವಾರು ಚರ್ಚೆಗಳಲ್ಲಿ ಮೂಡಿಬಂದಿರುವ ಅಭಿಪ್ರಾಯಗಳನ್ನು ಆಧರಿಸಿ ಗ್ರಾಮ ಸಭೆಗಳನ್ನು ಈ ಕೆಳಕಂಡಂತೆ ಕ್ರಮವಹಿಸಲು ಆದೇಶಿಸಿದೆ.

**ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ**

- ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯನ್ನು ಅಂತಿಮಗೊಳಿಸಲು 02 ಗ್ರಾಮ ಸಭೆಗಳನ್ನು ಕರೆಯತಕ್ಕದ್ದು.
- ಮೊದಲನೇ ಗ್ರಾಮ ಸಭೆಯು ಪೂರ್ವಭಾವಿ ಗ್ರಾಮ ಸಭೆಯಾಗಿದ್ದು (ಓರಿಯೆಂಟೇಷನ್ ಗ್ರಾಮ ಸಭೆ) ಹಾಗೂ ಎರಡನೇ ಗ್ರಾಮ ಸಭೆಯು ದೂರದೃಷ್ಟಿ ಯೋಜನೆಗೆ ಅಂತಿಮ ಅನುಮೋದನೆ ನೀಡುವ ಗ್ರಾಮ ಸಭೆಯಾಗಿರುತ್ತದೆ.
- ದೂರದೃಷ್ಟಿ ಯೋಜನೆಗೆ ಅನುಮೋದನೆ ನೀಡುವ ಅಂತಿಮ ಗ್ರಾಮ ಸಭೆಯನ್ನು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾಯೋಜನೆಯ ಪೂರ್ವಭಾವಿ ಗ್ರಾಮ ಸಭೆಯನ್ನಾಗಿಯೂ ಪರಿಗಣಿಸತಕ್ಕದ್ದು.

**ದೂರದೃಷ್ಟಿ ಯೋಜನೆ ಪೂರ್ವಭಾವಿ ಗ್ರಾಮ ಸಭೆ (ಓರಿಯೆಂಟೇಷನ್ ಗ್ರಾಮ ಸಭೆ)**

- ಪೂರ್ವಭಾವಿ ಗ್ರಾಮ ಸಭೆಯಲ್ಲಿ ಸಮುದಾಯದ ಪ್ರತಿನಿಧಿಗಳಿಗೆ ದೂರದೃಷ್ಟಿ ಯೋಜನೆಯ ಪ್ರಾಮುಖ್ಯತೆ ಮತ್ತು ಪ್ರಕ್ರಿಯೆ ಬಗ್ಗೆ ಮಾಹಿತಿ ನೀಡುವುದು.
- ಗ್ರಾಮ ಪಂಚಾಯಿತಿಯ ಮುಂದಿನ 05 ವರ್ಷಗಳ ಅವಧಿಗೆ ಸಿದ್ಧಪಡಿಸಿದ ಕರಡು ದೂರದೃಷ್ಟಿ ಯೋಜನೆಯು ಬಗ್ಗೆ ಮಾಹಿತಿ ನೀಡುವುದು(ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯಿಂದ ಪಿಪಿಟಿ ಮಾದರಿ (ಟೆಂಪ್ಲೆಟ್) ನೀಡಲಾಗುವುದು)
- ಸಮುದಾಯದಿಂದ ದೂರದೃಷ್ಟಿ ಯೋಜನೆಗೆ ಸಂಬಂಧಿಸಿದಂತೆ ಸಲಹೆಗಳನ್ನು ಕೋರುವುದು (ಪಂಚತಂತ್ರ 2.0 ನಲ್ಲಿ ನಮೂನೆಯ ಮಾದರಿಯನ್ನು ನೀಡಲಾಗುವುದು)
- ನಮೂನೆಯಲ್ಲಿ ಸಮುದಾಯದ ಅಭಿಪ್ರಾಯ ಪಡೆದು ಅಂತಿಮ ಗ್ರಾಮ ಸಭೆಯಲ್ಲಿ ಅಭಿಪ್ರಾಯಗಳಿಗೆ ಅನುಗುಣವಾಗಿ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಲು ಹಾಗೂ ಅನುಮೋದನೆ ಪಡೆಯುವ ಬಗ್ಗೆ ಮಾಹಿತಿ ನೀಡುವುದು.

**ದೂರದೃಷ್ಟಿ ಯೋಜನೆ ಅಂತಿಮ ಗ್ರಾಮ ಸಭೆ ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಪೂರ್ವಭಾವಿ ಗ್ರಾಮ ಸಭೆ (ಓರಿಯೆಂಟೇಷನ್ ಗ್ರಾಮ ಸಭೆ)**

- ಪೂರ್ವಭಾವಿ ಗ್ರಾಮ ಸಭೆಯ ನಂತರ ಸಮುದಾಯದಿಂದ ಬಂದಿರುವ ಸಲಹೆ ಮತ್ತು ಬೇಡಿಕೆಗಳನ್ನು ಒಗ್ಗೂಡಿಸಿ ಅಂತಿಮ ಗ್ರಾಮ ಸಭೆಯಲ್ಲಿ ಮಂಡಿಸುವುದು ಹಾಗೂ ದೂರದೃಷ್ಟಿ ಯೋಜನೆಯಲ್ಲಿ ಅಳವಡಿಸಬೇಕಾಗಿರುವ ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸುವುದು.
- ಗ್ರಾಮ ಪಂಚಾಯಿತಿ ಯೋಜನಾ ಸಮಿತಿಯು ಸಿದ್ಧಪಡಿಸಿದ, ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯಲ್ಲಿ ಪರಿಶೀಲನೆಯಾಗಿ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಿಂದ ಸಲ್ಲಿಸಲಾಗಿರುವ ಕರಡು ದೂರದೃಷ್ಟಿ ಯೋಜನೆಯನ್ನು ಚರ್ಚಿಸಿ ಅನುಮೋದನೆ ನೀಡುವುದು.

ಈ ಗ್ರಾಮ ಸಭೆಯು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಪೂರ್ವಭಾವಿ ಗ್ರಾಮ ಸಭೆಯಾಗಿರುತ್ತದೆ. ಆದ್ದರಿಂದ,

- ದೂರದೃಷ್ಟಿ ಯೋಜನೆಯ ಗುರಿಗಳ ಅನ್ವಯ ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುವ ಕುರಿತು ಸಮುದಾಯಕ್ಕೆ ಮಾಹಿತಿ ನೀಡುವುದು.
- ಶೀಘ್ರ ಮತ್ತು ಮೊದಲನೇ ವರ್ಷದಲ್ಲಿ ಆದ್ಯತೆ ಮೇರೆಗೆ ತೆಗೆದುಕೊಳ್ಳಬೇಕಾಗಿರುವ ವಲಯವಾರು ಚಟುವಟಿಕೆಗಳ ಬಗ್ಗೆ ಚರ್ಚಿಸುವುದು.
- ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಷ್ಠಾನ ಮಾಡುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳ ವಿವರಗಳು, ಬಾಕಿ ಇರುವ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡುವುದು ಹಾಗೂ ವೈಯಕ್ತಿಕ ಫಲಾನುಭವಿಗಳ ಆಯ್ಕೆ ಬಗ್ಗೆ ಸಮಗ್ರ ಮಾಹಿತಿ ನೀಡುವುದು.
- ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಗೆ ಅಂತಿಮ ಗ್ರಾಮ ಸಭೆಯಲ್ಲಿ ಅನುಮೋದನೆ ನೀಡುವ ಮುನ್ನ ಸಮುದಾಯದ ಸಲಹೆಗಳನ್ನು ನಿಗದಿಪಡಿಸಿದ ದಿನಾಂಕದೊಳಗೆ ವಿವರಗಳನ್ನು ನೀಡುವಂತೆ ಕೋರುವುದು(ಪಂಚತಂತ್ರ 2.0ನಲ್ಲಿ ನಮೂನೆಯ ಮಾದರಿಯನ್ನು ನೀಡಲಾಗುವುದು).

**ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಅಂತಿಮ ಗ್ರಾಮ ಸಭೆ**

- ಸಮುದಾಯದಿಂದ ಸ್ವೀಕರಿಸಲಾಗಿರುವ ಸಲಹೆಗಳ ಬಗ್ಗೆ ಗ್ರಾಮ ಸಭೆಯಲ್ಲಿ ವಿವರವಾದ ಮಾಹಿತಿ ನೀಡುವುದು.
- 2023-24ನೇ ಸಾಲಿಗೆ ಲಭ್ಯವಿರುವ ಗ್ರಾಮ ಪಂಚಾಯಿತಿಯ ಸಂಪನ್ಮೂಲ ಗುಚ್ಛ ಮತ್ತು ಇತರೆ ಇಲಾಖೆಗಳ ಕಾರ್ಯಕ್ರಮಗಳು ಮತ್ತು ಸಂಪನ್ಮೂಲಗಳ ಬಗ್ಗೆ ಮಾಹಿತಿ ನೀಡುವುದು.
- ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಭಾರತ ಸರ್ಕಾರ ಮತ್ತು ಕರ್ನಾಟಕ ಸರ್ಕಾರಗಳು ನೀಡಿರುವ ಕಾರ್ಯಕ್ರಮಗಳ ಮಾರ್ಗಸೂಚಿಗಳ ಅನ್ವಯ ಕ್ರಮವಹಿಸತಕ್ಕದ್ದು.
- ಸಮುದಾಯದೊಂದಿಗೆ ಚರ್ಚಿಸಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಕೈಗೆತ್ತಿಕೊಳ್ಳಬೇಕಾದ ಚಟುವಟಿಕೆಗಳ ಬಗ್ಗೆ ಚರ್ಚಿಸುವುದು ಮತ್ತು ಆದ್ಯತೀಕರಿಸುವುದು. ಪ್ರತಿ ಚಟುವಟಿಕೆ ದೂರದೃಷ್ಟಿ ಯೋಜನೆಯ 08 ವಲಯಗಳ ಗುರಿಗಳ ಅನ್ವಯ ಇರುವುದನ್ನು ಖಾತರಿಪಡಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಅನುಷ್ಠಾನ ಹಂತದಲ್ಲಿ ಇದ್ದು ಪ್ರಸ್ತುತ ಸಾಲಿನಲ್ಲಿ ಮುಂದುವರೆಸಬೇಕಾಗಿರುವ ಚಟುವಟಿಕೆಗಳಿಗೆ ಆದ್ಯತೆ ನೀಡುವುದು.
- ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳಿಗೆ ಆದ್ಯತೀಕರಿಸಿದ ಫಲಾನುಭವಿಗಳ ಪಟ್ಟಿಯನ್ನು ಅಂತಿಮಗೊಳಿಸುವುದು.
- ಮೇಲ್ಕಂಡ ಅಂಶಗಳನ್ನು ಒಳಗೊಂಡಂತೆ ಸಿದ್ಧಪಡಿಸಲಾಗುವ ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಗೆ ಗ್ರಾಮ ಸಭೆಯಿಂದ ಅನುಮೋದನೆ ಪಡೆಯುವುದು.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ದೂರದೃಷ್ಟಿ ಯೋಜನೆ ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಪೂರ್ವಭಾವಿ ಮತ್ತು ಅಂತಿಮ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ಆಯೋಜಿಸಲು ಆದೇಶಿಸಿದೆ ಹಾಗೂ ಪರಿಷ್ಕೃತ ಕಾಲಮಿತಿಯನ್ನು ಈ ಕೆಳಕಂಡಂತೆ ನಿಗದಿಪಡಿಸಿ ಆದೇಶಿಸಲಾಗಿದೆ.

**ದೂರದೃಷ್ಟಿ ಯೋಜನೆ ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಕಾಲಮಿತಿ**

| ಕ್ರ ಸಂ. | ಕಾಲಮಿತಿ | ಚಟುವಟಿಕೆ |
|---|---|---|
| 1 | ಫೆಬ್ರುವರಿ 18, 2023ರೊಳಗಾಗಿ ಎಲ್ಲಾ ಪ್ರಕ್ರಿಯೆಗಳ ದಿನಾಂಕಗಳನ್ನು ನಿಗದಿ ಪಡಿಸುವುದು. | 1. ಫೆಬ್ರುವರಿ 15, 2023ರ ಒಳಗಾಗಿ ಗ್ರಾಮ ಮತ್ತು ಗ್ರಾಮ ಪಂಚಾಯಿತಿ ಹಂತದ ಅಂಕಿ ಅಂಶಗಳ ಸಂಗ್ರಹಣೆಗೆ ಕೊನೆಯ ದಿನಾಂಕ<br>2. ಫೆಬ್ರುವರಿ 28, 2023ರೊಳಗೆ ವಾರ್ಡ್ ಸಭೆಗಳ ದಿನಾಂಕ ನಿಗದಿಪಡಿಸುವುದು.<br>3. ಗ್ರಾಮ ಪಂಚಾಯಿತಿ ಯೋಜನಾ ಸ್ಥಾಯಿ ಸಮಿತಿ ಸಭೆಗಳನ್ನು ಮಾರ್ಚ್ 04, 2023ರೊಳಗೆ ದಿನಾಂಕ ನಿಗದಿ ಪಡಿಸುವುದು<br>4. ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆಗಳು ಮಾರ್ಚ್ 06, 2023ರೊಳಗೆ<br>5. ದೂರದೃಷ್ಟಿ ಯೋಜನೆ ಪೂರ್ವಭಾವಿ ಗ್ರಾಮ ಸಭೆ ಮಾರ್ಚ್ 10, 2023ರೊಳಗೆ<br>6. ದೂರದೃಷ್ಟಿ ಯೋಜನೆ ಅಂತಿಮ ಗ್ರಾಮ ಸಭೆ ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಪೂರ್ವಭಾವಿ ಗ್ರಾಮ ಸಭೆ ಮಾರ್ಚ್ 15, 2023ರೊಳಗೆ |
| 2. | ಫೆಬ್ರುವರಿ 28, 2023 | ಕೇಂದ್ರೀಕೃತ ಗುಂಪು ಚರ್ಚೆ ಮತ್ತು ಸಹಭಾಗಿ ಗ್ರಾಮೀಣ ಪರಾಮರ್ಶೆಯನ್ನು ಮುಕ್ತಾಯಗೊಳಿಸುವುದು. ವಾರ್ಡ್ ಸಭೆಗಳನ್ನು ಆಯೋಜಿಸುವುದು. |
| 3. | ಮಾರ್ಚ್ 04, 2023 | ಗ್ರಾಮ ಪಂಚಾಯಿತಿ ಯೋಜನಾ ಸಮಿತಿಯು ಕರಡು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸುವುದು ಹಾಗೂ ಗ್ರಾಮ ಪಂಚಾಯಿತಿ ಹಣಕಾಸು ಲೆಕ್ಕಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಗಳನ್ನು ಆಯೋಜಿಸುವುದು. |
| 4. | ಮಾರ್ಚ್ 06, 2023 | ಗ್ರಾಮ ಪಂಚಾಯಿತಿಯ ಸಾಮಾನ್ಯ ಸಭೆ ಆಯೋಜಿಸುವುದು |
| 5. | ಮಾರ್ಚ್ 10, 2023 | ದೂರದೃಷ್ಟಿ ಯೋಜನೆ ಪೂರ್ವಭಾವಿ ಗ್ರಾಮ ಸಭೆ ಆಯೋಜಿಸುವುದು. |
| 6. | ಮಾರ್ಚ್ 15,2023 | ದೂರದೃಷ್ಟಿ ಯೋಜನೆಗೆ ಸಮುದಾಯದ ಸಲಹೆಗಳನ್ನು ಸ್ವೀಕರಿಸುವುದು ಹಾಗೂ ದೂರದೃಷ್ಟಿ ಯೋಜನೆ ಅಂತಿಮ ಗ್ರಾಮ ಸಭೆ ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಪೂರ್ವಭಾವಿ ಗ್ರಾಮ ಸಭೆ ಆಯೋಜಿಸುವುದು. |
| 7. | ಮಾರ್ಚ್ 31,2023 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಅಂತಿಮ ಗ್ರಾಮ ಸಭೆಯನ್ನು ಆಯೋಜಿಸುವುದು. |

ಮೇಲೆ ವಿವರಿಸಲಾದ ಆದೇಶದಂತೆ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು 05 ವರ್ಷದ ದೂರದೃಷ್ಠಿ ಯೋಜನೆ ಮತ್ತು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು ಕಡ್ಡಾಯವಾಗಿ ಸಿದ್ಧಪಡಿಸಿ ಪಂಚತಂತ್ರ 2.0 ಮತ್ತು/ಅಥವಾ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ನಿಗದಿಪಡಿಸಿರುವ ತಂತ್ರಾಂಶಗಳಲ್ಲಿ ಅಳವಡಿಸಲು ಈ ಮೂಲಕ ಆದೇಶಿಸಲಾಗಿದೆ. ಸದರಿ ಪ್ರಕ್ರಿಯೆಗಳನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳು ಎಲ್ಲಾ ಅವಶ್ಯ ಕ್ರಮಗಳನ್ನು ಕೈಗೊಳ್ಳಲು ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಲಾಗಿದೆ.

(ಉಮಾ ಮಹಾದೇವನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಪಂ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ. ರಸ್ತೆ, ಬೆಂಗಳೂರು.
5. ಪ್ರಾದೇಶಿಕ ಆಯುಕ್ತರು. ಬೆಂಗಳೂರು, ಬೆಳಗಾವಿ, ಮೈಸೂರು ಮತ್ತು ಕಲಬುರಗಿ.
6. ನಿರ್ದೇಶಕರು, ಅಬ್ದುಲ್ ನಜ್ಹೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
7. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
8. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
9. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಆಡಳಿತಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
10. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).

**<u>ಪ್ರತಿಯನ್ನು:</u>**

1. ಮಾನ್ಯ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ.
2. ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ, ಬೆಂಗಳೂರು.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು.
4. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು.
5. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಬೆಂಗಳೂರು .
6. ನಿರ್ದೇಶಕರು, ಇ-ಆಡಳಿತ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
7. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು.
8. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ / ವೆಬ್‌ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
9. ಕಛೇರಿ ಪ್ರತಿ.